# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1310–2021
ಮಂಡನಾಧಿಕಾರಿಗಳ ಶಾಖೆ : ಎಆರ್‌ಇ–1

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ:05–01–2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ಮಹ್ಮದ್ ಖಾಜಾ @ ಮಹ್ಮದ್ ಖಾಜಾ ಹುಸೇನ್, ಗ್ರಾಮ ಕಾರ್ಯದರ್ಶಿ, ಗ್ರೇಡ್–2, ಪ್ರಭಾರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗೊರೇಬಾಳ, ಸಾ: ಗುರುಗುಂಟಾ ತಾ:ಲಿಂಗಸೂಗೂರು, ರಾಯಚೂರು ಜಿಲ್ಲೆ** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

----

1). ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ರಾಯಚೂರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ **ಶ್ರೀ ಮಹ್ಮದ್ ಖಾಜಾ @ ಮಹ್ಮದ್ ಖಾಜಾ ಹುಸೇನ್, ಗ್ರಾಮ ಕಾರ್ಯದರ್ಶಿ, ಗ್ರೇಡ್–2, ಪ್ರಭಾರಿ ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಗೊರೇಬಾಳ, ಸಾ: ಗುರುಗುಂಟಾ ತಾ:ಲಿಂಗಸೂಗೂರು, ರಾಯಚೂರು ಜಿಲ್ಲೆ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಚೇತನ ಬಿನ್ ಲೋಕಪ್ಪ, ಗೋರೆಬಾಳ ತಾಂಡ–1, ಲಿಂಗಸೂಗೂರು, ರಾಯಚೂರು ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2). ದೂರುದಾರರು ತನ್ನ ದೂರಿನಲ್ಲಿ, ತನ್ನ ತಂದೆ ಲೋಕಪ್ಪ ಬಿನ್ ಜಾನಪ್ಪ ಇವರು ದನದ ಶೆಡ್ ನಿರ್ಮಾಣ ಪೂರ್ತಿಯಾಗಿದ್ದು, ಇದರ ಸಾಮಾಗ್ರಿಗಳ ಖರ್ಚು 21,000/– ರೂ.ಪಂಚಾಯಿತಿಯಿಂದ ಬಂದಿರುವುದಿಲ್ಲ ಹಾಗೂ ದೂರುದಾರರ ಸಂಬಂಧಿಕರಾದ 1) ರಮೇಶ (ಕಾಕ) 2) ಗುಲಶಪ್ಪ (ಕಾಕ), 3) ಸೋಮಲಪ್ಪ (ಸೋದರ ಮಾವ) ಇವರುಗಳಿಗೂ ಸಹ ಶೆಡ್ ಸಾಮಗ್ರಿ ಹಣ ತಲಾ 21000/– ಬಂದಿರುವುದಿಲ್ಲ. ಹಾಗೂ ದೂರುದಾರರ ಮನೆಯವರಾದ

ಶಕುಂತಲ (ತಮ್ಮನ ಹೆಂಡತಿ), ಈರಿಬಾಯಿ (ಚಿಕ್ಕವ್ವ) ರೇಣುಕಮ್ಮ (ಚಿಕ್ಕವ್ವ) ಕವಿತ (ಚಿಕ್ಕವ್ವ) ಇವರುಗಳಿಗೂ ಸಹ ಇಂದಿರಾ ಆವಾಜ್ ಯೋಜನೆಯಲ್ಲಿ ಮನೆ ನಿರ್ಮಿಸಿದ ಬಾಬ್ತು ಹಣ ಬಂದಿರುವುದಿಲ್ಲ. ಈ ಸಂಬಂಧವಾಗಿ ಮೇಲ್ಕಂಡ ಎಲ್ಲಾರೂ ದೂರುದಾರರನ್ನು ಮಂಜೂರು ಮಾಡಿಸಿಕೊಡುವಂತೆ ಕೇಳಿದ್ದು, ಅದರಂತೆ ದೂರುದಾರರು ಎದುರುದಾರರನ್ನು ವಿಚಾರಿಸಿದಾಗ, ಎದುರುದಾರರು 35000/- ರೂ. ಲಂಚದ ಹಣ ಕೊಟ್ಟರೆ, ಮಂಜೂರು ಮಾಡಿಸಿಕೊಡುವುದಾಗಿ ಹೇಳಿರುತ್ತಾರೆ. ಈ ಸಂಬಂಧವಾಗಿ ದೂರುದಾರರಿಂದ 15000/- ರೂ.ಲಂಚದ ಹಣವನ್ನು ಪಡೆದು, ಉಳಿದ 15000/- ಅಥವಾ 20000/- ಹಣವನ್ನು ಲಂಚವನ್ನಾಗಿ ಕೊಡು ಅಂತ ಹೇಳಿರುತ್ತಾರೆ. ಈ ಸಂಬಂಧವಾಗಿ ದೂರುದಾರರು ತಮ್ಮ ಮೊಬೈಲ್ ಸಂಖ್ಯೆ : 9964046161 ರಿಂದ ಎದುರುದಾರರ ಮೊಬೈಲ್ ನಂ: 9535457896 ಗೆ ಕರೆ ಮಾಡಿದಾಗ, ಎದುರುದಾರರು ಲಂಚದ ಹಣವನ್ನು ಕೊಡುವಂತೆ ದೂರುದಾರರನ್ನು ಒತ್ತಾಯಿಸಿರುತ್ತಾರೆ ಎಂದು ದೂರುದಾರರು ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ರಾಯಚೂರು, ಇವರಿಗೆ ದಿನಾಂಕ: 22-11-2017 ರಂದು ದೂರು ನೀಡಿದ್ದು, ಸದರಿ ದೂರು ಮೊ.ಸಂಖ್ಯೆ: 4/2017 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7ರ ಅಡಿಯಲ್ಲಿ ಪ್ರಕರಣವು ದಾಖಲು ಆಗಿರುತ್ತದೆ.

3). ದಿನಾಂಕ: 22-11-2017 ರಂದು ತನಿಖಾಧಿಕಾರಿಯವರು ಪಂಚರಾದ ಮಹ್ಮದ್ ಸಾಲಾರ್ ಹುಸೇನ್ ಪಂಚ-1, ಬಸವರಾಜ ಪಂಚ-2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 15,000/- ಗಳನ್ನು ಹಾಗೂ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಪಂಚರು ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಪ್ರತ್ಯೇಕ ಹಾಳೆಯಲ್ಲಿ ದಾಖಲಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯ ಸೂಚನೆಯ ಮೇರೆಗೆ ಮಹ್ಮದ್ ಸಾಲಾರ್ ಹುಸೇನ್ ಪಂಚ-1 ಇವರು ಪೊಲೀಸ್ ಸಿಬ್ಬಂದಿಯಿಂದ ಫಿನಾಫ್ತಿಲೀನ್ ಪೌಡರ್ ಲೇಪಿಸಿದ ಹಣವನ್ನು ಎಣಿಸಿ, ದೂರುದಾರರ ಪ್ಯಾಂಟಿನ ಬಲ ಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತಾನು ತೊಟ್ಟಿರುವ ಅಂಗಿಯ ಮೇಲೆ ಮಡಿಚಿರುವ ತೋಳನ್ನು ಕೆಳಗೆ ಇಳಿಸುವ ಮೂಲಕ ಸನ್ನೆ ಮಾಡಿ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಇವರ ಜೊತೆ ಬಸವರಾಜ ಪಂಚ-2 ಇವರು ಇದ್ದು, ಘಟನೆಯನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ. ಈ ಸಂಬಂಧವಾಗಿ ಪಂಚರ ಸಮಕ್ಷಮ ಪ್ರಾಯೋಗಿಕ ಪಂಚನಾಮೆಯನ್ನು ದಿ: 22-11-2017ರಂದು ಮ: 2-30 ಗಂಟೆಯಿಂದ ಮ: 4.00 ಗಂಟೆಯವರೆಗೆ ಬರೆದಿರುತ್ತಾರೆ.

4). ಅದೇ ದಿನ ಅಂದರೆ, ದಿನಾಂಕ: 22-11-2017 ರಂದು ತನಿಖಾಧಿಕಾರಿಯು ದೂರುದಾರರನ್ನು ಹಾಗೂ ಪಂಚರನ್ನು, ಸಿಬ್ಬಂದಿಯನ್ನು ಇಲಾಖಾ ಜೀಪಿನಲ್ಲಿ ಲಿಂಗಸೂರು ಬಸ್ ಸ್ಟಾಪ್ ಹತ್ತಿರ ಬಂದಿರುತ್ತಾರೆ. ನಂತರ, ತನಿಖಾಧಿಕಾರಿಯವರ ಸೂಚನೆ ಮೇರೆಗೆ ದೂರುದಾರರು

ತನ್ನ ಮೊಬೈಲ್‌ನಿಂದ ಎದುರುದಾರರಿಗೆ ಕರೆ ಮಾಡಿ ಕೇಳಿದಾಗ, ದೂರುದಾರರು ತಾನು ಬಸವಸಾಗರ ಕ್ರಾಸ್ ಬಳಿ ಎಳೆನೀರು ಅಂಗಡಿಯ ಹತ್ತಿರ ಇರುವುದಾಗಿ ತಿಳಿಸಿರುತ್ತಾರೆ. ನಂತರ ಎದುರುದಾರರು ದೂರುದಾರರ ಸಮೀಪ ಬಂದು, ದೂರುದಾರರ ಜೊತೆ ಮಾತನಾಡಿದಾಗ, ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ಕೊಟ್ಟಿರುತ್ತಾರೆ. ಸೂಚನೆಯನ್ನು ಪಡೆದ ನಂತರ ತನಿಖಾಧಿಕಾರಿ ದೂರುದಾರರನ್ನು ಭೇಟಿ ಮಾಡಿ, ಮಾಹಿತಿ ಪಡೆದಾಗ, ದೂರುದಾರರು ಎದುರುದಾರರನ್ನು ತನಿಖಾಧಿಕಾರಿಗೆ ತೋರಿಸಿ, ತನ್ನಿಂದ ಲಂಚದ ಹಣವನ್ನು ಪಡೆದ ವ್ಯಕ್ತಿ ಇವರೇ ಎಂದು ತಿಳಿಸಿರುತ್ತಾರೆ. ನಂತರ ತನಿಖಾಧಿಕಾರಿ ಎದುರುದಾರರಿಗೆ ತನ್ನನ್ನು ಪರಿಚಯ ಮಾಡಿಕೊಂಡು ಪ್ರಕರಣ ದಾಖಲಾಗಿರುವ ಬಗ್ಗೆ ತಿಳಿಸಿ, ವಿಚಾರಣೆಯನ್ನು ಮಾಡಿರುತ್ತಾರೆ. ನಂತರ ತನಿಖಾಧಿಕಾರಿಯ ಸೂಚನೆ ಮೇರೆಗೆ ಸಿಬ್ಬಂದಿಯು ಎದುರುದಾರರ ಎರಡೂ ಕೈಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೈಟ್ ದ್ರಾವಣದಲ್ಲಿ ತೊಳೆಸಿದಾಗ, ದ್ರಾವಣ ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ, ದೂರುದಾರರಿಂದ ಪಡೆದ ಲಂಚದ ಹಣ 15000/- ರೂ.ಗಳನ್ನು ತನ್ನ ಪ್ಯಾಂಟಿನ ಬಲಗಡೆಯ ಹಿಂದಿನ ಜೇಬಿನಿಂದ ತೆಗೆದು ಹಾಜರುಪಡಿಸಿರುತ್ತಾರೆ. ತನಿಖಾಧಿಕಾರಿಯ ಸೂಚನೆ ಮೇರೆಗೆ, ಪಂಚರು ಸದರಿ ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪ್ರಾಯೋಗಿಕ ಪಂಚನಾಮೆ ವೇಳೆಯಲ್ಲಿ ಬರೆದ ನೋಟುಗಳ ಮೌಲ್ಯ ಮತ್ತು ಸಂಖ್ಯೆಗಳನ್ನು ತಾಳೆ ಮಾಡಿಕೊಂಡು ಖಾತ್ರಿಪಡಿಸಿಕೊಂಡ ನಂತರ ತನಿಖಾಧಿಕಾರಿ ಸದರಿ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯ ಸೂಚನೆ ಮೇರೆಗೆ ಸಿಬ್ಬಂದಿ, ಎದುರುದಾರರ ಪ್ಯಾಂಟಿನ ಬಲಭಾಗದ ಒಳಭಾಗದ ಜೇಬನ್ನು ಗುರುತು ಮಾಡಿದ ನಂತರ ತನಿಖಾಧಿಕಾರಿಗಳು ಸದರಿ ಪ್ಯಾಂಟನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ ತನಿಖಾಧಿಕಾರಿಯವರು ಎದುರುದಾರರು ದೂರುದಾರರಿಂದ ಪಡೆದ ಲಂಚದ ಹಣಕ್ಕೆ ಸಂಬಂಧಿಸಿದಂತೆ ಸಮಜಾಯಿಷಿಕೆಯನ್ನು ಬರೆದುಕೊಡುವಂತೆ ತಿಳಿಸಿದಾಗ, ಎದುರುದಾರರು ತನ್ನ ಸಮಜಾಯಿಷಿಕೆಯಲ್ಲಿ ... **"ಈ ಕೆಳಗೆ ಸಹಿ ಮಾಡಿದ ಎಂ.ಡಿ ಖಾಜಾ ತಂದೆ ಹಮೀದ್ ಸಾ: ಗುರುಗುಂಟಾ ಇದ್ದ ನಾನು ಗೋರೇಬಾಳ ಗ್ರಾ.ಪಂ ನಲ್ಲಿ 8/11/2016 ರಿಂದ ಪಿ.ಡಿ.ಓ ಎಂದು ಕಾರ್ಯನಿರ್ವಹಿಸುತ್ತಿದ್ದು, ಚೇತನ ಎಂಬ ವ್ಯಕ್ತಿ ನನಗೆ ದನದ ಶೆಡ್ಡನ ಬಿ.ಓ.ಸಿ ಮಾಡಿಕೊಡಿ ಎಂದು ಕೇಳಿರುತ್ತಾನೆ. ನಾನು ಸದರಿ ಕಾಮಗಾರಿಗಳನ್ನು, ವಿಕ್ಷಣೆ ಮಾಡಿ ಬಿ.ಓ.ಸಿ ಯನ್ನು ಪಾವತಿ ಮಾಡುತ್ತೇನೆ ಎಂದು ತಿಳಿಸಿದೆ. ಆದರೆ ಸದರಿ ಚೇತನರವರು ಕೆಲಸ ಮಾಡಲು ನೀನು ಏನು ತಾಂತ್ರಿಕ ಸಹಾಯಕರ ಅಳತೆ ಪುಸ್ತಕ ಬರೆದಿರುವರು, ನೀನು ಅದರಂತೆ ಹಣ ಪಾವತಿಸು ಎಂದು ಬೆದರಿಕೆಯನ್ನ ಹಾಕಿ ನೀನು ನಮ್ಮ ಪಂಚಾಯತಿಯಲ್ಲಿ ಹೇಗೆ ಕೆಲಸ ಮಾಡುವೆ ನಾನು ನೋಡಿಕೊಳ್ಳುತ್ತೇನೆ ಎಂದು ಬೆದರಿಕೆಯನ್ನು ಹಾಕಿರುತ್ತಾನೆ. ನಾನು ಇವರಿಂದ ಯಾವುದೇ ಹಣವನ್ನು ಕೇಳಿರುವುದಿಲ್ಲ. ನಿಯಮದ ಪ್ರಕಾರ ಇರುವ ಎಲ್ಲಾ ಕೆಲಸ ಕಾರ್ಯಗಳನ್ನು ನಾನು ಮಾಡಿರುತ್ತೇನೆ. ಇವರು ನನಗೆ ಒತ್ತಾಯಪೂರ್ವಕವಾಗಿ ನನ್ನ ಜೇಬಿನಲ್ಲಿ 15,000/- ರೂಪಾಯಿ ಹಾಕಿರುತ್ತಾರೆ. ನಾನು ಇವನಿಂದ ಯಾವುದೇ ರೀತಿಯ ಹಣವನ್ನು ಪಡೆದಿರುವುದಿಲ್ಲ"** ಎಂದು ಸ್ವರಕ್ಷಣಾ ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ಹೇಳಿಕೆ ಬಗ್ಗೆ ತನಿಖಾಧಿಕಾರಿ, ದೂರುದಾರರ

ಅಭಿಪ್ರಾಯ ಕೇಳಲಾಗಿ ದೂರುದಾರರು ಎದುರುದಾರರ ಹೇಳಿಕೆಯನ್ನು ಅಲ್ಲಗಳೆದಿರುತ್ತಾರೆ. ತನಿಖಾಧಿಕಾರಿಯು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ನಂತರ, ಎದುರುದಾರರು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ಜಪ್ತಿ ಪಂಚನಾಮೆಯನ್ನು ದಿ: 22/11/2017 ರಂದು ರಾ: 11.00 ಗಂಟೆಯಿಂದ 11.45 ಗಂಟೆಯವರೆಗೆ ಪಂಚರ ಸಮಕ್ಷಮದಲ್ಲಿ ಬರೆದಿರುತ್ತಾರೆ.

5). ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ ಎದುರುದಾರರ ಧ್ವನಿಗೆ ಹಾಗೂ ಎದುರುದಾರರ ಮಾದರಿ ಧ್ವನಿಗೆ ಹೋಲಿಕೆ ಸಂಬಂಧವಾಗಿ ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತಾರೆ.

6). ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ ನಿಮ್ಮಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

7). ದಿನಾಂಕ: 23/08/2021 ರಂದು ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತನ್ನ ವಿವರಣೆಯನ್ನು ದಿ: 11/10/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ದೂರುದಾರರ ದೂರಿನ ಅಂಶವನ್ನು ಸಾರಸಗಟಾಗಿ ಅಲ್ಲಗಳೆದಿರುತ್ತಾರೆ ಮತ್ತು ತನಿಖಾಧಿಕಾರಿಗಳು ವಹಿಸುವಿಕೆ ಪಂಚನಾಮೆ ವೇಳೆಯಲ್ಲಿ ಮಾಡಿರುವ ಎಲ್ಲಾ ಪ್ರಕ್ರಿಯೆಗಳನ್ನು ಅಲ್ಲಗಳೆದಿರುತ್ತಾರೆ ಹಾಗೂ ತನಿಖಾಧಿಕಾರಿ ಜಪ್ತಿ ಪಂಚನಾಮೆ ವೇಳೆಯಲ್ಲಿ ಅನುಸರಿಸಿರುವ ಪ್ರಕ್ರಿಯೆ ಹಾಗೂ ನಮೂದು ಮಾಡಿರುವ ಅಂಶಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ತನಿಖಾಧಿಕಾರಿಯು ತನ್ನ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲು ಮಾಡಿದ್ದು, ಸಾಕ್ಷಿದಾರರ ಹೇಳಿಕೆ ಹಾಗೂ ದಾಖಲೆಗಳನ್ನು ಸೃಷ್ಟಿಸಿರುತ್ತಾರೆ. ತಾನು ಕರ್ತವ್ಯ ಲೋಪ ಮಾಡಿರುವುದಿಲ್ಲ ಹಾಗಾಗಿ ತನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಬಿಡಬೇಕೆಂದು ಕೋರಿರುತ್ತಾರೆ. ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ ಹಾಗೂ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ, ಹಾಗಾಗಿ ಅವರ ವಿರುದ್ಧ ಇಲಾಖಾ ವಿಚಾರಣೆ ಮಾಡದೆ ಇರಲು ಸೂಕ್ತ ಕಾರಣಗಳು ಕಂಡುಬರುವುದಿಲ್ಲ. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳಿಂದ ಮೇಲ್ನೋಟಕ್ಕೆ ದುರ್ನಡತೆ ಕಂಡು ಬರುತ್ತದೆ.

8). ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

9). ಈ ಮೇಲ್ಕಂಡ ಅಂಶಗಳನ್ನು ಮತ್ತು ತನಿಖಾ ವರದಿಯ ವಿವರಗಳನ್ನು ಪರಿಶೀಲಿಸಲಾಗಿ, ಎದುರುದಾರರು ತಮ್ಮ ಕರ್ತವ್ಯದಲ್ಲಿ ಸಂಪೂರ್ಣ ನಿಷ್ಠೆಯನ್ನು ಪಾಲಿಸದೇ, ಕರ್ತವ್ಯ ಶ್ರದ್ದೆಯನ್ನು ಹೊಂದಿರದೆ, ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು, ಭ್ರಷ್ಟಾಚಾರವೆಸಗಿ, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸುತ್ತ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 2021) ನಿಯಮ 3(1) (i) ರಿಂದ (iii) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

10). ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

8/2/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು